ಅಂತರ್ಜಲ ಮಟ್ಟ ಕುಸಿದಿರುವುದು

869 (1280); ಶ್ರೀ ಐಹೋಳೆ ಡಿ.ಮಹಾಲಿಂಗಪ್ಪ

ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟ ಕುಸಿದಿರುವುದರಿಂದ ಸಾರ್ವಜನಿಕರಿಗೆ ಕುಡಿಯುವ ನೀರು ಹಾಗೂ ಕೃಷಿಗೆ ನೀರಿಲ್ಲದೆ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು;

ಇ) ಜಮೀನು ಭೂ ಸ್ವಾಧೀನವಿಲ್ಲದೆ/ಖರ್ಚಿಲ್ಲದೆ ರೈತರಿಗೆ ಖಾಸಗಿ ಹೊಸಗಳಲ್ಲಿ ನಮ್ಮ ಹೊಲ ನಮ್ಮ ಕೆರೆ ಯೋಜನೆಯನ್ನು ರೂಪಿಸಿ ಕೃಷಿಯನ್ನು ಉತ್ತೇಜಿಸಲು ಸರ್ಕಾರ ಗಂಭೀರ ಚಿಂತನೇ ನಡೆಸುವುದೇ?

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಬಂದಿದೆ.

ಆ) ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನಲ್ಲಿ 9 ಇಂಗು ಕೆರೆಗಳನ್ನು ಮತ್ತು 4 ಸಣ್ಣ ನೀರಾವರಿ ಕೆರೆಗಳನ್ನು ನಿರ್ಮಿಸಲಾಗಿದೆ. ಇದರಿಂದ ಪರೋಕ್ಷವಾಗಿ ಅಂತರ್ಜಲ ಅಭಿವೃದ್ಧಿಗಾಗಿ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಕೆರೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಮುಂದುರೆದು, ಜಲಾನಯನ ಅಭಿವೃದ್ಧಿ ಇಲಾಖೆಯು ತಾಲ್ಲೂಕಿನ ಖುಷ್ಕಿ ಪ್ರದೇಶದಲ್ಲಿ ನೀರು ಸಂರಕ್ಷಣಾ ಕಾರ್ಯಕ್ರಮಗಳನ್ನು ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ, ಸುಜಲಾ ಯೋಜನೆ, ಕೃಷಿ ಭಾಗ್ಯ ಯೋಜನೆ ಮತ್ತು ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ರೈತರ ಜಮೀನುಗಳಲ್ಲಿ ಮಣ್ಣು ಮತ್ತು ನೀರು ಸಂರಕ್ಷಣಾ ಕಾರ್ಯವನ್ನು ಮಾಡಲಾಗುತ್ತಿದೆ.

ಇದಲ್ಲದೆ, ಈ ಭಾಗದಲ್ಲಿ ಆಗುವ ಮಳೆ ನೀರಿನ ಪ್ರಮಾಣ ಮತ್ತು ತಾಂತ್ರಿಕ ಶಕ್ಯತೆಗೆ ಅನುಗುಣವಾಗಿ ಹೊಸ ಇಂಗು ಕೆರೆಗಳನ್ನು ಅನುದಾನದ ಲಭ್ಯತೆಯ ಮೇರೆಗೆ ಕೈಗೊಂಡು ಅಂತರ್ಜಲ ಮಟ್ಟ ಹೆಚ್ಚಿಸಲು ಕ್ರಮ ಜರುಗಿಸಲಾಗುತ್ತಿದೆ.

ಇ) ಇಂತಹ ಯೋಜನೆಯನ್ನು ಸಣ್ಣ ನೀರಾವರಿ ಇಲಾಖೆಯಡಿ ಕೈಗೊಂಡಿರುವುದಿಲ್ಲ.

ವಿಧಾನ ಸಭೆಯ ಸದಸ್ಯರಾದ ಮಾನ್ಯ ಶ್ರೀ ಏಸೋಳೆ ಡಿ ಮಲ್ಲಿಕಾರ್ಜುನಗೌಡ ಇವರು ಮಂಡಿಸಿದ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1280ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಪಟ್ಟಣ	ತಾಲ್ಲೂಕು	ಕಾಮಗಾರಿ ಹೆಸರು	ಆಮ್ಟಗೊಳ್ಳಬೇಕಾದ ಸಮಯ	ನಿಗದಿ ಪಡಿಸಲಾದ ಮೊತ್ತ (ಎಸ್.ಎಸ್.ಆರ್.ಪಿ)	% ಕಡಿತ ಇರುವುದು ಮತ್ತು (ದಿನಾಂಕ:29-11-2014ರಂದು ಇದ್ದಂತೆ)	ಷರಾ
1	2	3	4	5	6	7	8
1	ಬಳಗಾವಿ	ರಾಯಬಾಗ	ಸವದಾಳ ಸಣ್ಣ ನೀರಾವರಿ ಕರ	180 00	22.20	20 00	
2	ಬಳಗಾವಿ	ರಾಯಬಾಗ	ಕಂಪಾಂಪಲಿ ಸಣ್ಣ ನೀರಾವರಿ ಕರ	146 00	9.03	50.00	
3	ಬಳಗಾವಿ	ರಾಯಬಾಗ	ಮುಗಳಖಾಲಿ ಸಣ್ಣ ನೀರಾವರಿ ಕರ	68.00	8.36	65 00	
4	ಬಳಗಾವಿ	ರಾಯಬಾಗ	ಮುಧೋಳ ಸಣ್ಣ ನೀರಾವರಿ ಕರ	53.00	8.68	35.00	
			ಒಟ್ಟು	447 00	48.27		
1	ಬಳಗಾವಿ	ರಾಯಬಾಗ	ಪಂಡಿಯಾಡ ಪಜಾಗ ಕರ	53.00	5 60	—	
2	ಬಳಗಾವಿ	ರಾಯಬಾಗ	ಸವದಾಡ್ಡಿ ಸೈಟ -1 ಪಜಾಗ ಕರ	63 00	10.50	—	
3	ಬಳಗಾವಿ	ರಾಯಬಾಗ	ಸವದಾಡ್ಡಿ ಸೈಟ -2 ಪಜಾಗ ಕರ	40.00	3.73	12 00	
4	ಬಳಗಾವಿ	ರಾಯಬಾಗ	ಪ್ಲಾಟೂಡ ಪಜಾಗ ಕರ	40.00	5 16	—	
5	ಬಳಗಾವಿ	ರಾಯಬಾಗ	ಕಪ್ಪಲಗುದ್ದಿ ಪಜಾಗ ಕರ	40.00	3.22	—	
6	ಬಳಗಾವಿ	ರಾಯಬಾಗ	ಮೋಡಟ್ಟಿ ಪಜಾಗ ಕರ	40.00	3 62	—	
7	ಬಳಗಾವಿ	ರಾಯಬಾಗ	ಬೂದಿಹಾಳ ಪಜಾಗರ	40.00	2.51	—	
8	ಬಳಗಾವಿ	ರಾಯಬಾಗ	ದಿವಾನಮೂರ ಪಟ್ಟಿ ಪಜಾಗ ಕರ	54.00	3.30	—	
9	ಬಳಗಾವಿ	ರಾಯಬಾಗ	ಮಾವಿಶಮೋಡಾ ಪತ್ತರ ಪಜಾಗ ಕರ	45.00	2.63	—	
			ಒಟ್ಟು	415 00	40.47		
ರಾಯಬಾಗ ಒಟ್ಟು			ಒಟ್ಟು	862.00	88.74		